**ಹೆಚ್ಚುವರಿ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ**
**ಸಿ.ಸಿ.ನಂ.೯೬/೨೦೧೮**

**ಪಿಡಬ್ಲು ೨**
**ಸಿಡಬ್ಲು ೨**

ಹೆಸರು : ಅಮೀನ ಅಲ್ಲಾಭಕ್ಷ ತಾಸೇವಾಲೆ

ವಯಸ್ಸು : ೫೩ ವರ್ಷ

ಉದ್ಯೋಗ : ವ್ಯವಹಾರ

ವಾಸ : ಬೀಡಿ ಗ್ರಾಮ, ಖಾನಾಪೂರ ತಾಲೂಕು.

**ದಿನಾಂಕ ೧೦-೦೭-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ : ಎಪಿಪಿ ಅವರಿಂದ.</u>**

ಚಾಸಾ ೧ ಮತ್ತು ೩ ರವರು ಗೊತ್ತು. ಈಗ ೬–೭ ತಿಂಗಳ ಹಿಂದೆ ನಾನು ಬೆಳಿಗ್ಗೆ ನಮ್ಮ ಊರಿನ ತಾಸೇವಾಲಿ ಗಲ್ಲಿಯಲ್ಲಿರುವ ಚಾಸಾ ೧೩ ರವರ ಮನೆಯ ಮುಂದಿನಿಂದ ಹೋಗುತ್ತಿದ್ದಾಗ ಚಾಸಾ ೧೩ ರವರ ಮನೆಯ ಮುಂದಿನ ಬಾಗಿಲಿನ ಬೀಗ ಮುರಿದು ಕೆಳಗೆ ಬಿದ್ದಿತ್ತು, ಬಾಗಿಲು ತೆರೆದಿತ್ತು. ನಾನು ಅವರ ಮನೆಯ ಮುಂದೆ ನಿಂತು ಚಾಸಾ ೧೩ ರವರನ್ನು ಕೂಗಿ ಕರೆದೆ. ಆದರೆ ಆತನ ಮನೆಯಲ್ಲಿ ಯಾರೂ ಇರಲಿಲ್ಲ. ತಕ್ಷಣ ನಾನು ಚಾಸಾ ೧ ರವರಿಗೆ ಫೋನ ಮಾಡಿ ವಿಷಯ ತಿಳಿಸಿ ಸ್ಥಳಕ್ಕೆ ಬರುವಂತೆ ಕರೆದೆನು. ಚಾಸಾ ೧ ರವರು ಬಂದ ನಂತರ ನಾನು ಅವರೊಂದಿಗೆ ಮನೆಯ ಒಳಗಡೆ ಹೋಗಿ ನೋಡಲಾಗಿ ಟ್ರೆಜರಿಯ ಬೀಗ ಮುರಿಯಲಾಗಿತ್ತು, ಅದರಲ್ಲಿನ ವಸ್ತುಗಳು ಚೆಲ್ಲಾಪಿಲ್ಲಿ ಆಗಿದ್ದವು. ತಕ್ಷಣ ನಾನು ಚಾಸಾ ೧ ರವರು ಚಾಸಾ ೧೩ ಫೋನ ಮಾಡಿ ವಿಷಯ ತಿಳಿಸಿದರು. ಚಾಸಾ ೧೩ ರವರು ಆ ಟ್ರೇಜರಿಯಲ್ಲಿ ಬಂಗಾರದ ನೆಕಲೇಸ ಇತ್ತು ಎಂದು ಹೇಳಿದರು. ನಾನು ಆ ಟ್ರೇಜರಿಯನ್ನು ಪರಿಶೀಲಿಸಿದಾಗ ಅದು ಇರಲಿಲ್ಲ. ಅದು ಕಳ್ಳತನವಾಗಿತ್ತು. ಈ ಬಗ್ಗೆ ಚಾಸಾ ೧ ರವರು ದೂರು ಕೊಟ್ಟರು.

ಆ ದಿನ ಬೆಳಿಗ್ಗೆ ೧೦.೦೦ ಗಂಟೆಗೆ ಪೋಲಿಸರು ಚಾಸಾ ೧೩ ರವರ ಮನೆಗೆ ಶ್ವಾನದಳದೊಂದಿಗೆ ಬಂದು ತಪಾಸಣೆ ಮಾಡಿ, ಪಂಚನಾಮೆ ಬರೆದರು. ನಂತರ ಪೋಲಿಸರು ನನ್ನ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬರೆದರು. ಸಾಕ್ಷಿಯು ಶ್ವಾನ ದಳ ಪಂಚನಾಮೆ ಮತ್ತು ಸ್ಥಳ ಪಂಚನಾಮೆಯಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಆ ಪಂಚನಾಮೆಗಳನ್ನು ಕ್ರಮವಾಗಿ ನಿಪಿ–೫ ಮತ್ತು ನಿಪಿ–೬ ಎಂದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ–೫(ಎ) ಮತ್ತು ನಿಪಿ–೬(ಎ) ಎಂದು

ಗುರುತಿಸಲಾಯಿತು. ನಿಪಿ ೬ ಪಂಚನಾಮೆ ಮಾಡಿ ಸ್ಥಳದಲ್ಲಿ ಮುರಿದು ಬಿದ್ದಿದ್ದ ಬೀಗವನ್ನು ತೆಗೆದುಕೊಂಡರು.ಆ ಬೀಗವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಎಂ.ಒ ೧ ನ್ನು ನೋಡಿ ಗುರುತಿಸಿರುತ್ತಾರೆ. ಪೋಲಿಸರು ಪಂಚನಾಮೆ ಮಾಡುವ ಕಾಲಕ್ಕೆ ನಿಪಿ–೪ ರಂತೆ ಫೋಟೊ ತೆಗೆದಿದ್ದರು.

ಸುಮಾರು ೪–೫ ತಿಂಗಳ ನಂತರ ಪೋಲಿಸರು ನನ್ನನ್ನು, ಚಾಸಾ ೧, ೧೩ ಮತ್ತು ಅವರ ಕುಟುಂಬದವರನ್ನು ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ ಸಾಕಷ್ಟು ಬಂಗಾರದ ಮತ್ತು ಬೆಳ್ಳಿಯ ಆಭರಣಗಳು ಇದ್ದವು. ಚಾಸಾ ೧ ಮತ್ತು ೧೩ ರವರು ತಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಬಂಗಾರದ ನೆಕ್ ಲೇಸ ನ್ನು ನೋಡಿ ಗುರುತಿಸಿದರು. ಆಗ ಪೋಲಿಸರ ವಶದಲ್ಲಿ ನ್ಯಾಯಾಲಯದಲ್ಲಿರುವ ಮೂರು ಜನ ಆರೋಪಿತರು ಇದ್ದರು. ಪೋಲಿಸರು ಈ ಆರೋಪಿತರೇ ಚಾಸಾ ೧೩ ರವರ ಮನೆಯಲ್ಲಿ ಕಳ್ಳತನ ಮಾಡಿದ್ದರು ಎಂದು ಮತ್ತು ಆರೋಪಿತರ ವಶದಿಂದ ಅದನ್ನು ಜಪ್ತುಪಡಿಸಿಕೊಂಡಿದ್ದೆವು ಎಂದು ತಿಳಿಸಿದರು. ಆ ದಿನ ಠಾಣೆಯಲ್ಲಿ ನೋಡಿದ ಆಭರಣವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಪಿ–೩ ರಲ್ಲಿನ ನೆಕಲೇಸನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು ಃ</u>** <u>ಶ್ರೀ ಎ ಡಿ ಎಲ ವಕೀಲರಿಂದ</u>

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಚಾಸಾ ೧ ರವರು ನನ್ನ ಹತ್ತಿರದ ಸ್ನೇಹಿತರು ಎಂದರೆ ನಿಜ. ಪಂಚನಾಮೆಯನ್ನು ಪೋಲಿಸರು ಬರೆದಿದ್ದರು. ಪಂಚನಾಮೆಗಳನ್ನು ಇದೇ ರೀತಿ ಬರೆಯುವಂತೆ ನಾನು ಮತ್ತು ಚಾಸಾ ೩ ರವರು ಮಾಹಿತಿ ಕೊಟ್ಟಿರಲಿಲ್ಲ. ನಿಪಿ ೫ ಮತ್ತು ೬ ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಬರೆದ ನಂತರ ಇಲ್ಲಿಯವರೆಗೂ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ನಾನು ಪೋಲಿಸ ಠಾಣೆಗೆ ಒಂದು ಬಾರಿ ಮಾತ್ರ ಹೋಗಿದ್ದೆ. ಚಾಸಾ ೧೩ ರವರ ನೆಕಲೇಸನ್ನು ಯಾರು ಕಳ್ಳತನ ಮಾಡಿದ್ದರು ಎಂದು ನನಗೆ ಇವತ್ತಿನವರೆಗೂ ಗೊತ್ತಿಲ್ಲ. ನಿಪಿ–೪ ರಲ್ಲಿ ಕಾಣುವ ಮನೆ ಚಾಸಾ ೧೩ ರವರ ಮನೆ ಎಂದು ಗುರುತಿಸಲು ಯಾವುದೇ ವಿಶೇಷ ಗುರುತು ಅಥವಾ ಚಿಹ್ನೆ ಇಲ್ಲ ಎಂದರೆ ನಿಜ. ಪೋಲಿಸರು ನನ್ನ ತಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ನಾನು ಆರೋಪಿತರನ್ನು ಮತ್ತು ಆಭರಣವನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಜಪ್ತಾದ ಆಭರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು

ಎಂದರೆ ಸರಿಯಲ್ಲ. ಎಂ.ಒ ೧ ರ ರೀತಿಯ ಬೀಗಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ನಿಜ. ಚಾಸಾ ೧ ರವರು ನನ್ನ ಸ್ನೇಹಿತರಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)**

**ಓ .ಹೇ .ಕೇ .ಸರಿ ಇದೆ .**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ**
**ಸಿ.ಸಿ.ನಂ.೯೬/೨೦೧೮**

**ಪಿಡಬ್ಲು ೧**
**ಸಿಡಬ್ಲು ೧**

ಹೆಸರು : ನಜೀರಅಹಮದ್ ಶಮಶುದ್ದೀನ ಹೊನ್ನಾಪುರ
ವಯಸ್ಸು : ೩೮ ವರ್ಷ
ಉದ್ಯೋಗ : ಚಾಲಕ
ವಾಸ : ಶಮಷೇರ ಗಲ್ಲಿ, ಬೀಡಿ ಗ್ರಾಮ, ಖಾನಾಪೂರ.

**ದಿನಾಂಕ ೧೭-೦೪-೨೦೧೮ ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ.**

ಚಾಸಾ ೧೩ ನನ್ನ ತಮ್ಮ, ಚಾಸಾ ೧೪ ನನ್ನ ತಮ್ಮನ ಹೆಂಡತಿ. ನಾವಿಬ್ಬರೂ ಬೇರೆ ಬೇರೆಯಾಗಿ ಸುಮಾರು ೬ ವರ್ಷಗಳಿಂದ ವಾಸವಾಗಿದ್ದೇವೆ. ಚಾಸಾ ೧೩ ತಾಶೇವಾಲಿ ಗಲ್ಲಿಯಲ್ಲಿ ವಾಸವಿದ್ದಾನೆ. ದಿನಾಂಕ ೧೯-೦೩-೨೦೧೭ ರಂದು ಚಾಸಾ ೧೩ ಮತ್ತು ೧೪ ರವರು ಅವರ ಮನೆಗೆ ಬೀಗ ಹಾಕಿಕೊಂಡು ಗೋವಾಕ್ಕೆ ದುಡಿಯಲು ಹೋಗಿದ್ದರು. ಮರು ದಿನ ಬೆಳಿಗ್ಗೆ ೮.೦೦ ಗಂಟೆಗೆ ಚಾಸಾ ೧೦ (ಚಾಸಾ ೨) ರವರು ನಮ್ಮ ಮನೆಗೆ ಬಂದು ನನ್ನ ತಮ್ಮನ ಮನೆಯ ಕೀಲಿ ಕೆಳಗೆ ಬಿದ್ದಿದೆ, ಬಾಗಿಲು ತೆರೆದಿದೆ ಬಂದು ನೋಡುವಂತೆ ಹೇಳಿದರು. ತಕ್ಷಣ ನಾನು ಮನೆಗೆ ಹೋಗಿ ನೋಡಿದೆ. ಅಲ್ಲಿ ನೋಡಿದಾಗ ಟ್ರೆಜರಿಯ ಬೀಗ ಮುರಿಯಲಾಗಿತ್ತು, ಅದರಲ್ಲಿನ ವಸ್ತುಗಳು ಚೆಲ್ಲಾಪಿಲ್ಲಿ ಆಗಿದ್ದವು. ತಕ್ಷಣ ನಾನು ಚಾಸಾ ೧೦ ರವರಿಗೆ ಫೋನ ಮಾಡಿ ವಿಷಯ ತಿಳಿಸಿದೆ. ಆಗ ಚಾಸಾ ೧೦ ರವರು ಆ ಟ್ರೆಜರಿಯಲ್ಲಿ ೨೦ ಗ್ರಾಂನ ಬಂಗಾರದ ನೆಕ್ ಲೇಸ ಇತ್ತು ಎಂದು ಹೇಳಿದ. ನಾನು ಆ ಟ್ರೇಜರಿಯನ್ನು ಪರಿಶೀಲಿಸಿದಾಗ ಅದು ಇರಲಿಲ್ಲ. ಅದು ಕಳ್ಳತನವಾಗಿತ್ತು. ಈ ಬಗ್ಗೆ ಠಾಣೆಗೆ ಹೋಗಿ ದೂರು ಕೊಟ್ಟೆ. ಆ ದೂರನ್ನು ಚಾಸಾ ೩ ರವರು ಬರೆದರು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ ೧ ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ ೧ (ಎ) ಎಂದು ಗುರುತಿಸಲಾಯಿತು.

ಆ ದಿನ ಬೆಳಿಗ್ಗೆ ೧೦.೦೦ ಗಂಟೆಗೆ ಪೋಲಿಸರು ನನ್ನ ತಮ್ಮನ ಮನೆಗೆ ಶ್ವಾನದಳದೊಂದಿಗೆ ಬಂದು ತಪಾಸಣೆ ಮಾಡಿದರು . ಅಷ್ಟನ್ನು ಹೊರತುಪಡಿಸಿ ಮತ್ತೇನನ್ನು ಪೋಲಿಸರು ಮಾಡಲಿಲ್ಲ . ಸುಮಾರು ೬-೭ ತಿಂಗಳ ನಂತರ ಪೋಲಿಸರು ಮೂರು ಜನ ಆರೋಪಿತರನ್ನು ಕರೆದುಕೊಂಡು ನನ್ನ ತಮ್ಮನ ಮನೆಗೆ ಬಂದಿದ್ದರು . ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ಮನೆಯನ್ನು ತೋರಿಸಿದರು . ಅದರಂತೆ ಪೋಲಿಸರು ಪಂಚನಾಮೆ ಬರೆದುಕೊಂಡು , ಫೋಟೊ ತೆಗೆಸಿದರು. ಸಾಕ್ಷಿಯು ಆ ಫೊಟೊವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ ೨ ಎಂದು ಗುರುತಿಸಲಾಯಿತು. ಆ ನಂತರ ನನ್ನನ್ನು , ಚಾಸಾ ೧೦ ಮತ್ತು ೧೧ ರವರನ್ನು ಠಾಣೆಗೆ ಕರೆಸಿದ್ದರು . ಠಾಣೆಯಲ್ಲಿ ಸಾಕಷ್ಟು ಬಂಗಾರದ ಮತ್ತು ಬೆಳ್ಳಿಯ ಆಭರಣಗಳು ಇದ್ದವು. ಅವುಗಳಲ್ಲಿ ನನ್ನ ತಮ್ಮನ ಮನೆಯಲ್ಲಿ ಕಳ್ಳತನವಾಗಿದ್ದ ಬಂಗಾರದ ನೆಕ್ ಲೇಸ ಇತ್ತು . ಅದನ್ನು ನೋಡಿ ಗುರುತಿಸಿ ಅದು ನನ್ನ ತಮ್ಮನ ಮನೆಯಲ್ಲಿ ಕಳ್ಳತನವಾದ ಆಭರಣ ಎಂದು ಪೋಲಿಸರಿಗೆ ತಿಳಿಸಿದೆ. ಆಗ ಪೋಲಿಸರ ವಶದಲ್ಲಿ ನ್ಯಾಯಾಲಯದಲ್ಲಿರುವ ಮೂರು ಜನ ಆರೋಪಿತರು ಇದ್ದರು . ಪೋಲಿಸರು ಈ ಅರೋಪಿತರೇ ನನ್ನ ತಮ್ಮನ ಮನೆಯಲ್ಲಿ ಕಳ್ಳತನ ಮಾಡಿದ್ದರು ಎಂದು ತಿಳಿಸಿದರು . ನ್ಯಾಯಾಲಯದಿಂದ ಆ ಆಭರಣವನ್ನು ನಾನು ನನ್ನ ತಮ್ಮನ ಪರವಾಗಿ ಬಿಡಿಸಿಕೊಂಡೆ . ಆ ಆಭರಣವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಫೋಟೊದಲ್ಲಿನ ತನ್ನ ಆಭರಣವನ್ನು ನೋಡಿ ಗುರುತಿಸಿದ್ದು ಆ ಫೋಟೊವನ್ನು ನಿಪಿ ೩ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ .

ಸಾಕ್ಷಿಯು ಇನ್ನೊಂದು ಫೊಟೊವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ ೪ ಎಂದು ಗುರುತಿಸಲಾಯಿತು. ಆ ಫೋಟೊವನ್ನು ನನ್ನ ತಮ್ಮನ ಮನೆಯಲ್ಲಿ ಕಳ್ಳತನವಾದ ಬಗ್ಗೆ ಪಂಚನಾಮೆ ಮಾಡುವ ಕಾಲಕ್ಕೆ ತೆಗೆದರು . ಪೋಲಿಸರಿಗೆ ಆಗ ನಾನೇ ಸ್ಥಳವನ್ನು ತೋರಿಸಿದ್ದೆ. ಪಂಚನಾಮೆ ಕಾಲಕ್ಕೆ ಮುಂದಿನ ಬಾಗಿಲಿಗೆ ಹಾಕಿದ್ದ ಬೀಗ ಮುರಿದು ಬಿದ್ದಿರುವುದನ್ನು ನಾನೇ ತೋರಿಸಿದ್ದೆ. ಪೋಲಿಸರು ಆ ಬೀಗವನ್ನು ಜಪ್ತುಪಡಿಸಿಕೊಂಡರು . ಸಾಕ್ಷಿಯು ಆ ಬೀಗವನ್ನು ನೋಡಿ ಗುರುತಿಸಿದ್ದು , ಅದನ್ನು ಎಂ.ಓ ೧ ಎಂದು ಗುರುತಿಸಲಾಯಿತು .

<u>**ಪಾಟೀ ಸವಾಲು :** ಶ್ರೀ ಎ ಡಿ ಎಲ ವಕೀಲರಿಂದ</u>

ಪೋಲಿಸರು ಲ್ಯಾಪ ಟಾಪನೊಂದಿಗೆ ನಮ್ಮ ಮನೆಗೆ ಬಂದಿದ್ದರು . ನಾನು ಅಲ್ಲಿಯೇ ದೂರು ಬರೆಸಿ ಕೊಟ್ಟೆನು . ಚಾಸಾ ೩ ರವರು ದೂರು ಕೊಡುವುದರಿಂದ ಹಿಡಿದು ಕೊನೆಯವರೆಗೂ ಬಹಳಷ್ಟು ಸಹಾಯ ಮಾಡಿದ್ದಾರೆ ಎಂದರೆ ನಿಜ . ಆತ ನನ್ನ ಒಳ್ಳೆಯ ಸ್ನೇಹಿತ ಹಾಗೂ ಅಣ್ಣ-ತಮ್ಮಂದಿರ ಹಾಗೆ ಇರುವ ವ್ಯಕ್ತಿ ಎಂದರೆ ನಿಜ. ನನ್ನ ತಮ್ಮನ ಮನೆಯ ಸಂಖ್ಯೆ ೫೧ ಇರಬಹುದು . ನನಗೆ ಸರಿಯಾಗಿ ಗೊತ್ತಿಲ್ಲ . ನನ್ನ ತಮ್ಮನ ಮನೆಯಲ್ಲಿ ಕಳ್ಳತನ ಆಗಿರಲಿಲ್ಲ , ನಾನು ಈ ಬಗ್ಗೆ ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ .

ಚಾಸಾ ೨ ರವರೂ ಸಹ ನನ್ನೊಂದಿಗೆ ಬಹಳ ಚೆನ್ನಾಗಿದ್ದಾರೆ ಎಂದರೆ ನಿಜ . ಪಂಚನಾಮೆಯನ್ನು ಬರೆಯಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ , ನಾನು , ಚಾಸಾ ೨ ಮತ್ತು ೩ ರವರು ಮಾಹಿತಿ ಕೊಟ್ಟಿಲ್ಲ . ನನ್ನ ತಮ್ಮನ ಮನೆಯಲ್ಲಿ ಪೋಲಿಸರು ಯಾವುದೇ ಪಂಚನಾಮೆ ಮಾಡಿಲ್ಲ , ಯಾವುದೇ ಫೋಟೊ ತೆಗೆಸಿಲ್ಲ , ಅವುಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಠಾಣೆಯಲ್ಲಿ ನಾನು ಆರೋಪಿತರನ್ನು ಮತ್ತು ಆಭರಣವನ್ನು ನೋಡಿಲ್ಲ ಎಂದರೆ ಸರಿಯಲ್ಲ . ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಜಪ್ತಾದ ಆಭರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಫೊಟೊಗಳನ್ನು ಪೋಲಿಸರು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ .

ಪಾಟೀ ಸವಾಲುಃ ಶ್ರೀ ಎಸ ಎಂ ಹೆಚ ವಕೀಲರಿಂದ

ನಾನು ದೂರು ಕೊಟ್ಟ ನಂತರ ಪೋಲಿಸರು ನನ್ನನ್ನು ಯಾವತ್ತೂ ಠಾಣೆಗೆ ಕರೆಸಿಲ್ಲ ಎಂದರೆ ನಿಜ . ಎಂ.ಓ ೧ ನ್ನು ಪೋಲಿಸರಿಗೆ ನಾನೇ ಕೊಟ್ಟಿದ್ದೆ ಎಂದರೆ ನಿಜ . ಆರೋಪಿತರೇ ಕಳ್ಳತನ ಮಾಡಿದ್ದರು ಎಂದು ಪೋಲಿಸರ ಹೇಳಿಕೆಯ ಮೇರೆಗೆ ಹೇಳುತ್ತಿದ್ದೇನೆ ಎಂದರೆ ನಿಜ. ನನಗೆ ವೈಯಕ್ತಿಕ ಮಾಹಿತಿ ಇಲ್ಲ .

(೨ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಉಳಿದ ಎಲ್ಲ ಆರೋಪಿತರು ಅಳವಡಿಸಿಕೊಂಡಿರುತ್ತಾರೆ.)

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರಗೆ ಬೆರಳಚ್ಚು ಮಾಡಲಾಗಿದೆ)

ಓ .ಹೇ .ಕೇ .ಸರಿ ಇದೆ .

ಹೆಚ್ಚು ವರಿ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.